# ನಿಲ್ಲಬೇಕಯ್ಯ ಕೃಷ್ಣಯ್ಯ ನಿಲ್ಲಬೇಕಯ್ಯ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 341.
2. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 112.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 302.
4. **Note:** Lyrics given here are as per Ref. 1 & Ref. 2. The wordings in Ref. 3 are same as in Ref. 2, except few minor differences which are not considered here.
5. **Note:** Singer has followed lyrics as in Ref. 1.

ರಾಗ: ಮೋಹನ ತಾಳ: ಅಟ

ನಿಲ್ಲಬೇಕಯ್ಯ ಕೃಷ್ಣಯ್ಯ ನೀ || ಪ ||

ನಿಲ್ಲಬೇಕಯ್ಯ ಮಲ್ಲಮರ್ಧನ ಸಿರಿ-
ವಲ್ಲಭ ಎನ್ನ ಹೃದಯದಲ್ಲಿ ಸಂತತ ನೀ || ಅಪ ||

ಸುಪ್ಪಾಣಿ ಮುತ್ತಿಟ್ಟು ನೋಡುವೆ ಸದಾ
ಚಪ್ಪಾಳೆ ತಟ್ಟಿ ನಾ ಪಾಡುವೆ
ಅಪ್ಪಾ ಶ್ರೀ ಕೃಷ್ಣನೆ ಎತ್ತಿ ಮುದ್ದಿಸಿಕೊಂಬೆ
ಸರ್ಪಶಯನ ಕೃಪೆ ಮಾಡೆಂದು ಬೇಡುವೆ || 1 ||

ಚಂದದ ಹಾಸಿಗೆ ಹಾಸುವೆ ಪುನುಗು
ಗಂಧ ಕಸ್ತೂರಿಯ ಪೂಸುವೆ
ಅಂದದಿ ಮುತ್ತಿನ ಹಾರ ಹಾಕುವೆ ಆ-
ನಂದದಿಂದಲಿ ನಿನ್ನ ಎತ್ತಿ ಮುದ್ದಿಸಿಕೊಂಬೆ || 2 ||

ನೀಲದ ಕಿರೀಟ ನಿನಗಿಡುವೆ ಬಲು

ಬಾಲ ಲೀಲೆಗಳನು ಪಾಡುವೆ
ಮಾಲೋಲ ಪುರಂದರ ವಿಠಲನ ರಾಯನೆ
ನಿಲ್ಲು ಎನ್ನ ಮನದಲ್ಲಿ ಒಂದೇ ಘಳಿಗೆ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಮಲ್ಲಮರ್ಧನ** = ಚಾಣೂರ - ಮುಷ್ಟಿಕರನ್ನು ಕೊಂದವ

**ಪುನುಗು** = ಒಂದು ಜಾತಿಯ ಕಾಡು ಬೆಕ್ಕಿನಿಂದಾಗುವ ಸುಗಂಧ ದ್ರವ್ಯ

**ಸಿರಿವಲ್ಲಭ** – ಮೂಲ ಪ್ರಕೃತಿಯಾದ ಲಕ್ಷ್ಮಿಯೊಂದಿಗೆ ಅವಿನಾಭಾವದಿಮದ ಇರುವ ಪರಮಾತ್ಮ.

**ಎನ್ನ ಹೃದಯದಲ್ಲಿ** – ಜೀವ, ಈಶ ಇಬ್ಬರೂ ಏಕತ್ರವಾಗಿ ಇರುವ ಹೃದಯ ಕಮಲದಲ್ಲಿ; ಬಿಂಬರೂಪಿಯಾಗಿ.

**ಸುಪ್ಪಾಣಿ** – ಸುಪ್ಪಾಣಿ ಮುತ್ತು, ಶ್ರೇಷ್ಠವಾದ ಮುತ್ತಿನ ಆಭರಣ. (ಚುಪ್ಪಾಣಿ – ಮುತ್ತಿಡುವಾಗ ಮಾಡುವ ಶಬ್ದವನ್ನನುಕರಿಸಿ)

**ಮಾಲೋಲ** = ಲಕ್ಷ್ಮೀಲೋಲ, ಶ್ರೀಹರಿ

**Classification:** Keerthane
**Ankita:** purandara vittala
**Location:** NA
**Category:** pooja tatva, Bimba Roopa
**Sub-Category:** Krishna, hrudaya, muttu, shesha, hasige, gandha, Kasturi, kirita, bimba roopa, abharana,
**Pravachana:** NA
**Explanation:** NA